I/438072/2023

**ಕರ್ನಾಟಕ ಸರ್ಕಾರ**

ಸಂ:ಸಕನಿ/ಇಡಿ-06/ವಿ.ನಿ.ನಿ/2023-24

ಆಯುಕ್ತರ ಕಾರ್ಯಾಲಯ,ಸಮಾಜ ಕಲ್ಯಾಣ ಇಲಾಖೆ,
5ನೇ ಮಹಡಿ, ಬಹು ಮಹಡಿಗಳ ಕಟ್ಟಡ,
ಡಾ: ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ:07-06-2023

**-:ಸುತ್ತೋಲೆ:-**

ವಿಷಯ : ಆಯಾ ಜಿಲ್ಲಾ ವಲಯದ ಜಿಲ್ಲಾ ಪಂಚಾಯತ್ ಮತ್ತು ತಾಲ್ಲೂಕು ಪಂಚಾಯತ್ ಕಾರ್ಯಕ್ರಮಗಳಡಿಯಲ್ಲಿ ವಸತಿ ಶಾಲೆ/ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳ ನಿರ್ವಹಣೆಗಾಗಿ ಒದಗಿಸಿರುವ ಅನುದಾನದಲ್ಲಿ ಒಪ್ಪಿತ ವೆಚ್ಚವನ್ನು ಹೊರತು ಪಡಿಸಿ ಇನ್ಯಾವುದೇ ವೆಚ್ಚಗಳನ್ನು ಭರಿಸದೆ ಇರುವ ಕುರಿತು.

ಉಲ್ಲೇಖ: ದಿನಾಂಕ:07-06-2023ರಂದು ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು ರವರ ಅಧ್ಯಕ್ಷತೆಯಲ್ಲಿ ನಡೆದ ಸಭೆ

***

2023-24ನೇ ಸಾಲಿಗೆ ಆಯಾ ಜಿಲ್ಲಾ ವಲಯದ ಜಿಲ್ಲಾ ಪಂಚಾಯತ್‌ನ ಲೆಕ್ಕ ಶೀರ್ಷಿಕೆ:2225-00-101-0-32(090)ರಡಿ ವಸತಿ ಶಾಲೆಗಳ ನಿರ್ವಹಣೆ, ಲೆಕ್ಕ ಶೀರ್ಷಿಕೆ:2225-00-101-029(090)ರಡಿ ಸರ್ಕಾರಿ ಕಾಲೇಜು ವಿದ್ಯಾರ್ಥಿನಿಲಯಗಳ ನಿರ್ವಹಣೆ ಮತ್ತು ತಾಲ್ಲೂಕು ಪಂಚಾಯತ್‌ನ ಲೆಕ್ಕ ಶೀರ್ಷಿಕೆ:2225-00-101-0-61(090)ರಡಿಯಲ್ಲಿನ ಕಾರ್ಯಕ್ರಮಗಳಿಗೆ ಒದಗಿಸಿರುವ ಅನುದಾನವನ್ನು ಉದ್ದೇಶಿತ(ಆಹಾರ, ಬಾಡಿಗೆ ಕಟ್ಟಡಗಳಲ್ಲಿ ನಡೆಯುತ್ತಿರುವ ವಿದ್ಯಾರ್ಥಿನಿಲಯಗಳ ಬಾಡಿಗೆ ಪಾವತಿ, ವಿದ್ಯುತ್, ಸಮವಸ್ತ್ರ, ಲೇಖನಾ ಸಾಮಗ್ರಿ, ಶುಚಿ ಸಂಭ್ರಮ ಕಿಟ್, ಶೌಚಾಯತ ಸ್ವಚ್ಛತಾ ಸಾಮಗ್ರಿಗಳ ಖರೀದಿ, ಶೌಚಾಲಯಗಳ ಸ್ವಚ್ಛಗೊಳಿಸಲು,ಇನ್ನಿತರೆ ಅವಶ್ಯಕವಾದ ವೆಚ್ಚ)ವೆಚ್ಚಕ್ಕಾಗಿ ಮಾತ್ರ ವೆಚ್ಚ ಭರಿಸತಕ್ಕದು. ಮುಖ್ಯವಾಗಿ ಆಹಾರ, ಬಾಡಿಗೆ, ವಿದ್ಯುತ್ ಹಾಗೂ ಸರ್ಕಾರಿ ಸಂಸ್ಥೆಗಳ ಬಿಲ್ಲುಗಳನ್ನು ಆದ್ಯತೆಯ ಮೇರೆಗೆ ಪಾವತಿಸುವುದು. ಒಂದು ವೇಳೆ ಆರ್ಥಿಕ ವರ್ಷಾಂತ್ಯದಲ್ಲಿ ಅನುದಾನ ಉಳಿಕೆ ಇದ್ದರೆ, ಸದರಿ ಉಳಿಕೆ ಅನುದಾನ ಸಂಬಂಧ ಕೇಂದ್ರ ಕಛೇರಿಯಿಂದ ಅನುಮತಿ ಪಡೆದ ನಂತರ ಇತರೆ ಮೂಲಭೂತ ಸಾಮಗ್ರಿಗಳ ಖರೀದಿಗೆ ಬಳಸುವುದು.

ವಸತಿ ಶಾಲೆ/ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳ ನಿರ್ವಹಣೆಗಾಗಿ ನಿಗದಿಪಡಿಸಿರುವ ಒಪ್ಪಿತ ವೆಚ್ಚಗಳನ್ನು ಭರಿಸಿದ ನಂತರವು ಅನುದಾನ ಉಳಿಕೆಯಾದಲ್ಲಿ, ಉಳಿಕೆಯಾಗುವ ಅನುದಾನದಲ್ಲಿ ಇತರೆ ಅಗತ್ಯ ಮೂಲಭೂತ ಸೌಲಭ್ಯಗಳನ್ನು ಖರೀದಿಸಬೇಕಾದಲ್ಲಿ, ಆಯಾ ಜಿಲ್ಲೆಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್ ರವರ ಮೂಲಕ ಸೂಕ್ತ ಪ್ರಸ್ತಾವನೆಯನ್ನು ಈ ಕಛೇರಿಗೆ ಸಲ್ಲಿಸಿ, ಕಡ್ಡಾಯವಾಗಿ ಅನುಮೋದನೆ ಪಡೆದು ವೆಚ್ಚ ಭರಿಸತಕ್ಕದು. ಒಂದು ವೇಳೆ ಅನುಮತಿ ಪಡೆಯದೆ ವೆಚ್ಚ ಮಾಡಿದಲ್ಲಿ ಅಂತಹ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲಾಗುವುದು

**Signed by K Rakesh Kumar**
**Date: 09-06-2023 13:41:10**

**ಆಯುಕ್ತರು,**
ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು.

ಪ್ರತಿಯನ್ನು:

1. ಸರ್ಕಾರದ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ಬೆಂಗಳೂರು ರವರ ಮಾಹಿತಿಗಾಗಿ.
2. ಸರ್ಕಾರದ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು ರವರ ಮಾಹಿತಿಗಾಗಿ.

3. ಎಲ್ಲಾ ಜಿಲ್ಲೆಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್ ರವರುಗಳ ಮಾಹಿತಿಗಾಗಿ.
4. ಉಪ ನಿರ್ದೇಶಕರು, ನಂ.49, ಖಜಾನೆ ನೆಟ್ ವರ್ಕ್ ಮ್ಯಾನೇಜ್‌ಮೆಂಟ್ ಸೆಂಟರ್, 2ನೇ ಮಹಡಿ, ಖನಿಜ ಭವನ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು.
5. ಮುಖ್ಯ ಲೆಕ್ಕಾಧಿಕಾರಿಗಳು, ಸಮಾಜ ಕಲಾಣ ಇಲಾಖೆ, ಬೆಂಗಳೂರು ರವರ ಮಾಹಿತಿಗಾಗಿ.
6. ಖಜಾನಾಧಿಕಾರಿಗಳು, ರಾಜ್ಯ ಹುಜೂರು ಖಜಾನೆ, ಬೆಂಗಳೂರು.
7. ಎಲ್ಲಾ ತಾಲ್ಲೂಕುಗಳ ಕಾರ್ಯನಿರ್ವಹಣಾಧಿಕಾರಿಗಳು, ತಾಲ್ಲೂಕು ಪಂಚಾಯತ್ ರವರುಗಳಿಗೆ ಸೂಕ್ತ ಕ್ರಮಕ್ಕಾಗಿ.
8. ಎಲ್ಲಾ ಜಿಲ್ಲೆಗಳ ಜಂಟಿ/ಉಪ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ ರವರುಗಳಿಗೆ ಸೂಕ್ತ ಕ್ರಮಕ್ಕಾಗಿ.
9. ಸಹಾಯಕ ನಿರ್ದೇಶಕರು, ಗ್ರೇಡ್-1 & 2, ಸಮಾಜ ಕಲ್ಯಾಣ ಇಲಾಖೆ ರವರುಗಳಿಗೆ ಅಗತ್ಯ ಸೂಕ್ತ ಕ್ರಮಕ್ಕಾಗಿ.
10. ಕಛೇರಿ ಪ್ರತಿ/ಇತರೆ.